<u>2ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.2109/2013

ಸಿಡಬ್ಲ್ಯೂ11 ಪಿಡಬ್ಲ್ಯೂ9

| | | |
|---|---|---|
| ಸಾಕ್ಷಿಯ ಹೆಸರು | - | ಶಿವಾನಂದ ಅಲ್ಲಪ್ಪ ಆರೇನಾಡ |
| ವಯಸ್ಸು | - | 39 ವರ್ಷ |
| ಉದ್ಯೋಗ | - | ಪೋಲಿಸ ಉಪನೀರಿಕ್ಷಕರು ವಿಜಯಪೂರ ರೇಲ್ವೆ ಪೋಲಿಸ ಠಾಣೆ |
| ವಾಸ | - | ವಿಜಯಪೂರ |

ದಿನಾಂಕಃ 29-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>**

ನಾನು 23-05-2013 ರಿಂದ 23-06-2013 ರವರೆಗೆ ಗೋಕಾಕ ಗ್ರಾಮೀಣ ಪೋಲಿಸ ಠಾಣೆಯಲ್ಲಿ ಪೋಲಿಸ ಉಪನಿರೀಕ್ಷಕರು ಎಂದು ಹೆಚ್ಚುವರಿ ಪ್ರಭಾರದಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

ಗೋಕಾಕ ಗ್ರಾಮೀಣ ಪೋಲಿಸ ಠಾಣೆಯ ಅಪರಾಧ ಸಂಃ 33/2013 ಕಾನೂನಿನ ಕಲಂ 143, 147, 323, 354, 504, 506 ಸಹಕಲಂ 149 ರ ಆಯ್.ಪಿ.ಸಿ. ನೇದ್ದರಡಿಯಲ್ಲಿ ಮುಂದಿನ ತನಿಖೆಗಾಗಿ ಚಾಸಾ-10 ರವರಿಂದ ಕಡತವನ್ನು ಪಡೆದುಕೊಂಡು ದಿಃ 05-06-2013 ರಂದು ವೈದ್ಯಕೀಯ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಾನು ಮುಂದಿನ ತನಿಖೆಯಲ್ಲಿ ಯಾವದೇ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿಲ್ಲಾ. ಆರೋಪಿತರು ಯಾವದೇ ತಪ್ಪು ಮಾಡಿಲ್ಲಾ ಅಂತಾ ಗೊತ್ತಿದ್ದರೂ  ಆರೋಪಿತರ ವಿರುದ್ಧ ಸುಳ್ಳು ದೋಷಾರೊಪಣೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಹೇಳಿದಂತೆ ಚಾಸಾ-1 ರವರಿಗೆ ಯಾವದೇ ಗಾಯ ಆಗಿಲ್ಲಾ ಎಂದರೆ ಸರಿಯಲ್ಲ. ಈ ಪ್ರಕರಣದ ಯಾವದೇ ಮಾಹಿತಿ ಇರದಿದ್ದರೂ ಪಿರ್ಯಾದಿಗೆ ಅನುಕೂಲವಾಗಲು ಸುಳ್ಳು ದೋಷಾರೋಪಣೆ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-
2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.